Smt. GRACE TUCKER.—I want notice.

Sri G. DUGGAPPA.—May I know whether it is not a fact that the Government cannot push through this scheme, as they are not in a position to supply concerned syllabi ?

Smt. GRACE TUCKER.—It is not the syllabus which is under question. But it is the question of providing equipments and proper buildings.

Sri A. R. BADRI NARAYAN.—May I know how many applications have been received for the conversion of high schools into multi-purpose high schools?

Smt. GRACE TUCKER.—I do not have the information here.

Sri A. R. BADRI NARAYAN.—Is there any basis for converting these schools into multi-purpose schools ?

Mr. SPEAKER.—That is a different question.

Sri D. DEVARAJ URS.—What is the basis on which these sixteen shools have been selected ?

Smt. GRACE TUCKER.—There are a number of things taken into consideration for converting the schools into multi-purpose schools. Chiefly, they are the technical side, availability of raw material, equipment, buildings, etc. All these things are taken into consideration while granting conversion of the high schools into multi-purpose high schools.

2-30 P.M.

Sri C. J. MUCKANNAPPA.—May I know, out of 16 schools how many are for old Mysore and how many for the other areas ?

Smt. GRACE TUCKER.—Notice.

Sri J. M. SHAMSUDDIN,—What are the types of multi-purpose high schools that have been proposed ?

Smt. GRACE TUCKER.—Agriculture would be one of the courses of study ; others are technical and commercial courses, and in the case of women's educational institutions there will be home science.

Sri J. M. SHAMSUDDIN.—How many of the 16 schools proposed are of the commercial type ?

Smt. GRACE TUCKER.—That information is not available because these 16 schools will start functioning in the coming year.

Release of forest land for landless in Kanakapura Taluk

Q.—176. Sri S. KARIAPPA (Virupakshipura).—

Will the Government be pleased to state :—

(*a*) the number of persons in Kanakapura Taluk who have applied for release of forest lands for cultivation ;

(*b*) the names of forests from which they desire such release ;

(*c*) the names of villages of the applicants ?

A.—Sri H. S. RUDRAPPA (Minister for Agriculture).—

(*a*) The petitions for grant of lands are often signed by many persons. No record is kept of the number of applicants.

(*b*) The petitioners requested for grant of lands from the following Forests :—

Anekal Range.

1. Gullahatty Kaval S. F.
2. Bettahally Kaval S. F.

Kanakapura Range.

3. Manjunatha S. F.
4. Gangadharanagudda S. F.
5. Bilikal S. F.
6. Bettahally Wade S. F.
7. Benathimari S. F.
8. Ramadevarabetta S. F.

Sathnur Range.

9. Chilandadi S. F.
10. Chunchi (West) S. F.
11. Chunchi (East) S. F.
12. Basavanabetta S. F.
13. Achal S. F.

Channapatna Range.

14. Kabbal S. F.

(*c*) The villagers of the following villages applied for grant of lands :—

1. Bannigere
2. Bennagodu
3. Bangalore

4. Battigemotlu
5. Doddalahally
6. Doddakurubarahally
7. Erangere
8. Gulganahally (Kanakapura Range.)
9. Gollahally
10. Gulaganahally (Sathnur Range)
11. Gattalu
12. Haniyur
13. Honniganahally
14. Hegnur
15. Hanchaguli
16. Hunasanahally
17. Jodihalasur
18. Jogammanahally
19. Kanchanahally
20. Kodihalli
21. Mukkodlu
22. Maraladoddi
23. Mullahally
24. Nellihally
25. Neralwadi
26. Neralahalli
27. Narayanapura
28. Ramanagaram
29. Seegekote
30. Sathnur
31. Sundagatta Dhakle
32. Thimmegowdanadoddi
33. Tattekere
34. Tippur Mavathur
35. Utharahally
36. Uyyambally
37. Yedamaranahally

ಶ್ರೀ ಎಸ್. ಕರಿಯಪ್ಪ.—ಈಗ ತಾವು ಉತ್ತರದಲ್ಲಿ ತಿಳಿಸಿರುವಂಥ ಈ 14 ಅರಣ್ಯ ಪ್ರದೇಶಗಳನ್ನು ತಾವು ಮೊನ್ನೆ ಆ ತಾಲ್ಲೂಕಿಗೆ ಭೆಟ್ಟಿ ಕೊಟ್ಟಿದ್ದಾಗ ನಂದರ್ಶನ ಮಾಡಿಕೊಂಡು ಬಂದಿರುತ್ತೀರಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ನಾನು ಎಲ್ಲವನ್ನೂ ನೋಡಿರುವುದಿಲ್ಲ. ಎಲ್ಲೋ ಒಂದೆರಡು ಅರಣ್ಯಗಳನ್ನು ಮಾತ್ರ ನೋಡಿರಬಹುದಷ್ಟೆ.

ಶ್ರೀ ಎಸ್. ಕರಿಯಪ್ಪ.—ತಾವು ಯಾವಯಾವ ಅರಣ್ಯಗಳನ್ನು ನೋಡಿದ್ದೀರೋ ಆ ಅರಣ್ಯಗಳ ಹೆಸರನ್ನು ಹೇಳಬಲ್ಲಿರಾ?

ಶ್ರೀ ಎಚ್. ಎಸ್. ರುದ್ರಪ್ಪ.—ನಾನು ಮಳಲುವಾಡಿ ಫಾರೆಸ್ಟ್ ಜಮೀನನ್ನು ನೋಡಿದ್ದೇನೆ.

ಶ್ರೀ ಎಸ್. ಕರಿಯಪ್ಪ.—ತಾವು ಅಲ್ಲಿ ನೋಡುವುದಕ್ಕೆ ಹೋಗಿದ್ದಾಗ ಅಲ್ಲಿ ಜಮೀನನ್ನು ಆಕ್ರಮಿಸಿಕೊಂಡಿದ್ದ ಜನರಿಗೆ ನೀವೇ ಆ ಭೂಮಿಯಲ್ಲಿ ವ್ಯವಸಾಯವನ್ನು ನಡೆಸಿಕೊಂಡುಹೋಗಬಹುದೆಂಬುದಾಗಿ ಅವರಿಗೆ ತಾವೇನಾದರೂ ಅಪ್ಪಣೆ ಮಾಡಿರುತ್ತೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

ಶ್ರೀ ಎಸ್. ಕರಿಯಪ್ಪ.—ಈಗ ಈ 14 ಕಾಡುಗಳಲ್ಲೂ ಜಮೀನನ್ನು ಕೊಡಬೇಕೆಂದು ಅರ್ಜಿ ಹಾಕಿಕೊಂಡಿರತಕ್ಕ ಜನರು ಈಗಾಗಲೇ ಅವರವರು ಕೇಳಿರತಕ್ಕಂಥ ಜಮೀನನ್ನು ಅವರು ಆಕ್ರಮಿಸಿಕೊಂಡಿರುತ್ತಾರಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಆ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ತಾವೇನಾದರೂ ಅರ್ಜಿಕೊಟ್ಟರೆ ಅದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಹೋದ ಜನವರಿ ತಿಂಗಳಿನಲ್ಲಯೇ ಈ ಆಕ್ರಮಣ ಮಾಡಿರುವ ಜಮೀನ್ದಾರರಿಂದ ಆ ಜಮೀನನ್ನು ಬಿಡಿಸಬೇಕೆಂಬುದಾಗಿ ಸರ್ಕಾರದಿಂದ ಒಂದು ಸರ್ಕ್ಯುಲರನ್ನು ಹೊರಡಿಸಿರಲಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಹೌದು.

ಶ್ರೀ ಎಸ್. ಕರಿಯಪ್ಪ.—ಈ ಬಿಳಿಕಲ್ ಫಾರೆಸ್ಟಿನಲ್ಲಿ ಅಕ್ರಮದಿಂದ ಜಮೀನನ್ನು ಹಿಡಿದುಕೊಂಡಿರತಕ್ಕವರಿಗೆ ಸರ್ಕಾರದವರು ಆ ಜಮೀನುಗಳನ್ನು ವ್ಯವಸಾಯ ಮಾಡಿಕೊಂಡುಹೋಗಲು ನಿಮಗೇ ಬಿಟ್ಟುಬಿಟ್ಟಿದೆ ಎಂಬುದಾಗಿ ತಿಳಿಸಿದ್ದಾರೆಂಬುದು ನಿಜವಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ನಿಜವಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ 14 ಕಾಡುಗಳಷ್ಟೆಕೆ ಯಾವುದಾದರೂ ಕಾಡಿನಲ್ಲಿ ಜನರಿಗೆ ಅವಶ್ಯಕವಾಗಿ ಬೇಕಾಗಿರುವಂಥ ಜಮೀನನ್ನು ಬಿಟ್ಟುಕೊಡತಕ್ಕ ಬಗ್ಗೆ ಸರ್ಕಾರದವರೇನಾದರೂ ಪರ್ಯಾಲೋಚನೆ ಮಾಡಿದ್ದಾರೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಈ ಫಾರೆಸ್ಟ್‌ಗಳಿಗೆ ಸಂಬಂಧಪಟ್ಟ ಎಷ್ಟು ಜಮೀನನ್ನು ವ್ಯವಸಾಯಕ್ಕಾಗಿ ಬಿಟ್ಟುಕೊಡಬೇಕೆಂದು ಪರಿಶೀಲನೆ ಮಾಡಿ ನಿರ್ಧರಿಸಲಾಗಿತ್ತೋ ಆ ಪ್ರಕಾರ ಕೆಲವು ಜಮೀನುಗಳನ್ನಾಗಲೇ ಬಿಟ್ಟುಕೊಡಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಷ್ಟು ಜಮೀನನ್ನು ಯಾವಯಾವ ಕಾಡಿನಲ್ಲಿ, ಎಷ್ಟು ಗ್ರಾಮಗಳಿಗೆ ಎಷ್ಟು ಜನರಿಗೆ ಎಂಬುದನ್ನು ತಿಳಿಸಲು ಸಾಧ್ಯವೆ?

(ಉತ್ತರವಿಲ್ಲ)

ಶ್ರೀ ಎಂ. ಲಿಂಗೇಗೌಡ.—ಬಿಳಿಕಲ್ ಫಾರೆಸ್ಟ್‌ಗೆ ಮಾನ್ಯ ಮಂತ್ರಿಗಳು ಹೋಗಿ ನೋಡಿಕೊಂಡು ಬಂದ ಮೇಲೆ–ಅಲ್ಲಿ ಯಾವ ಜಮೀನನ್ನು ಅಕ್ರಮವಾಗಿ ಅರ್ಜಿದಾರರು ಆಕ್ರಮಿಸಿಕೊಂಡಿರುತ್ತಾರೋ ಅಂಥ ಜಮೀನನ್ನು ಅವರು ಕೂಡಲೇ ಬಿಟ್ಟುಕೊಡಬೇಕೆಂದು ಮಂತ್ರಿಗಳು ಹೇಳಿದ್ದಾಗ್ಗೂ ಆ ಜನರಿಗೂ ಆ ಭೂಮಿಯಲ್ಲಿ ವ್ಯವಸಾಯ ನಡೆಸುತ್ತಲೇ ಇದ್ದಾರೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

ಶ್ರೀ ಎಂ. ಲಿಂಗೇಗೌಡ.—ಹಾಗೆ ಅವರು ಅಕ್ರಮ ಸಾಗುವಳಿ ಮಾಡುತ್ತಿರುವ ಜಮೀನನ್ನು ಕೂಡಲೆ ಬಿಟ್ಟುಕೊಡಬೇಕೆಂದು ತಾವು ಹೇಳಿರಲಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಅಲ್ಲಿ ಒಂದು ಪಿಜ್ಜಾಸೆ ಉಂಟಾಗಿತ್ತು. ಅದಕ್ಕಾಗಿ ರೆವಿನ್ಯೂ ಇಲಾಖೆಯವರನ್ನೂ ಮತ್ತು ಅರಣ್ಯ ಇಲಾಖೆಯವರನ್ನೂ ಒಟ್ಟಾಗಿ ಕೂಡಿಸಿ ಆ ಜಮೀನನ್ನು ಸರ್ವೆ ಮಾಡಿಸಿ ಆ ಭೂಮಿ ಫಾರೆಸ್ಟ್ ಇಲಾಖೆಗೆ ಸೇರಿದ್ದರೆ ರಿಪೋರ್ಟ್‌ಮಾಡಿ ಎಂದು ತಿಳಿಸಲಾಗಿತ್ತು.

ಶ್ರೀ ಎಂ. ಲಿಂಗೇಗೌಡ.—ಆ ಜಮೀನು ಫಾರೆಸ್ಟ್ ಇಲಾಖೆಗೇ ಸೇರಿದ್ದೆಂದು ಸರ್ಕಾರಕ್ಕೆ ರಿಪೋರ್ಟ್ ಬಂದಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಕಳೆದ ಜೂಲೈ ಹತ್ತನೆಯ ತಾರೀಖಿನ ದಿನ ರೆವಿನ್ಯೂ ಮತ್ತು ಫಾರೆಸ್ಟ್ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ಜಮೀನುಗಳ ಅಳತೆ ನಡೆಯುತ್ತದೆಂಬ ವಿಚಾರದಲ್ಲಿ ಸಂಬಂಧಪಟ್ಟ

(ಶ್ರೀ ಎಚ್. ಎಸ್. ರುದ್ರಪ್ಪ)

ಪಾರ್ಟಿಗಳಿಗೆ ನೋಟೀಸನ್ನು ಜಾರಿ ಮಾಡಲಾಗಿದೆ ಯೆಂದು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರೇ ನನಗೆ ತಿಳಿಸಿರುತ್ತಾರೆ.

ಶ್ರೀ ಎಂ. ಲಿಂಗೇಗೌಡ.—ಆ ಬಿಳಿದಾಳ್ ಫಾರೆಸ್ಟ್‌ಗೆ ಸೇರಿದ್ದ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡಿದ್ದ ರೈತರಿಂದ 300 ರೂಪಾಯಿ ಜುಲ್ಮಾನೆ ತೆಗೆದುಕೊಂಡ ಅನಂತರ ಅವರಿಗೆ ಆ ಜಮೀನಿನಲ್ಲಾದ ಫಸಲನ್ನು ಬಿಟ್ಟು ಕೊಡಲಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಆ 300 ರೂಪಾಯಿ ಗಳು ಜುಲ್ಮಾನೆಯಲ್ಲ. ಈಗ ಅವರು ಅಕ್ರಮವಾಗಿ ಫಸಲನ್ನು ತೆಗೆದಿದ್ದಂಥ ಜಮೀನು ಸರ್ಕಾರಕ್ಕೆ ಸೇರಿದ್ದೆಂದು ರುಜುವಾತಾದಲ್ಲಿ ಈಗ ಆ ಬೆಳೆಯನ್ನು ಹಾಗೆಯೇ ಅವರಿಗೆ ಬಿಟ್ಟುಕೊಟ್ಟರೆ ನಾಳೆ ನಮಗೆ ಅವರಿಂದ ಯಾವ ಹಣವೂ ವಸೂಲಾಗಲಾರದೆಂಬ ಕಾರಣದಿಂದ ಆ 300 ರೂಪಾಯಿಗಳನ್ನು ಮುಂಗಡವಾಗಿ ತೆಗೆದು ಕೊಂಡಿದೆ. ನಾಳೆ ಆ ಜಮೀನು ಅವರದೇ ಎಂದು ತೀರ್ಮಾನವಾದರೆ ಆ ಹಣ ಅವರಿಗೆ ಸೇರುತ್ತದೆ. ಇಲ್ಲ ಆ ಜಮೀನು ಸರ್ಕಾರದ್ದೆಂದು ತೀರ್ಮಾನವಾದರೆ ಆ ಹಣ ಸರ್ಕಾರಕ್ಕೆ ಸೇರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಇಲ್ಲಿ ತಿಳಿಸಿರುವ ಅರಣ್ಯಗಳೆಲ್ಲ ಯಾವ ದರ್ಜೆಗೆ ಸೇರಿದವುಗಳು?

ಶ್ರೀ ಎಚ್. ಎಸ್. ರುದ್ರಪ್ಪ.—ಸ್ಟೇಟ್ ಫಾರೆಸ್ಟ್‌ಗಳು.

ಶ್ರೀ ಡಿ. ದೇವರಾಜ ಅರಸ್.—ಆ ವಿಚಾರವನ್ನಲ್ಲ ನಾನೀಗ ಕೇಳುತ್ತಿರುವುದು. ಇವೇನು "ಎವರ್ ಗ್ರೀನ್ ಫಾರೆಸ್ಟ್‌ಗಳೋ" ಅಥವಾ ಇನ್ನಾವ ಬಗೆಯ ಫಾರೆಸ್ಟ್‌ಗಳೋ ಎಂದು?

ಶ್ರೀ ಎಚ್. ಎಸ್. ರುದ್ರಪ್ಪ.—ನಾನು ಎಲ್ಲ ಫಾರೆಸ್ಟ್‌ಗಳನ್ನೂ ಪೂರ್ತಿಯಾಗಿ ನೋಡಿಲ್ಲ. ಕೆಲವು ಬಹಳ ಕಡತರೆ ಆಗಿವೆ. ಆದಾಗ್ಯೂ ಈಗೇನೋ ಅಲ್ಲಿ ಒಳ್ಳೆಯ ಫಾರೆಸ್ಟ್ ಆಗುತ್ತಿದೆ.

Sri H. M. CHANNABASAPPA.—Can the Government tell me in which of these forests are trees which are of shrub type?

Sri H. S. RUDRAPPA.—Generally, in all these State forests there is a good variety of timber.

Sri H. M. CHANNABASAPPA.—In view of the pressure from the people round about will the Government examine the question of releasing the lands to the people?

Sri H. S. RUDRAPPA.—I have taken it for granted that the Hon'ble Member when he was the Minister in charge of "Forest" has examined the whole case in full. If he thinks it has not been considered in full Government will examine it.

ಶ್ರೀ ಎ. ಮುನಿಯಪ್ಪ.—ಆಗಲೇ ಮಾನ್ಯ ಮಂತ್ರಿಗಳು ಅಲ್ಲಿ ಕೆಲವು ಜಮೀನನ್ನು ಹಂಚಲಾಯಿತೆಂದು ಅಪ್ಪಣೆ ಕೊಡಿಸಿದರು. ಹಾಗೆ ಎಷ್ಟು ಎಕರೆ ಜಮೀನನ್ನು ಹಂಚಲಾಯಿತು?

ಶ್ರೀ ಎಚ್. ಎಸ್. ರುದ್ರಪ್ಪ.—ನನಗೆ ಗೊತ್ತಿಲ್ಲ. ಆದರೆ ಒಂದು ಕಡೆ ಮಾತ್ರ 500 ಎಕರೆ ಜಮೀನನ್ನು ರಿಲೀಜ್ ಮಾಡಲಾಗಿದೆ.

ಶ್ರೀ ಎ. ಮುನಿಯಪ್ಪ.—ಹರಿಜನರಿಗೇನಾದರೂ ಅಲ್ಲಿ ಜಮೀನನ್ನು ಕೊಡಲಾಯಿತೇ?

ಶ್ರೀ ಎಚ್. ಎಸ್. ರುದ್ರಪ್ಪ.—ನಾವು ಭೂಮಿಯನ್ನು ರಿಲೀಜ್ ಮಾಡಿ ರೆವಿನ್ಯೂ ಇಲಾಖೆಗೆ ಬಿಟ್ಟು ಕೊಡುವುದೆಷ್ಟೋ ಅಷ್ಟೆ ನಮ್ಮ ಕೆಲಸ.

Sri A. R. BADRI NARAYAN.—What is the total acreage of forest lands in Bilikal Taluk?

Sri H. S. RUDRAPPA.—Notice.

ಶ್ರೀ ಎಸ್. ಕರಿಯಪ್ಪ.—ಈ ಅರ್ಜಿಗಳನ್ನೆಲ್ಲಾ ಕೇವಲ ಒಬ್ಬಿಬ್ಬರು ಮಾತ್ರ ಸೇರಿಕೊಂಡು ಬರೆಸಿ ಇದನ್ನೊಂದು ನಂಪಾದನೆಯ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ. ನಿಜವಾಗಿಯೂ ಜಮೀನು ಬೇಕೆನ್ನುವವರು ಮಾತ್ರ ಅರ್ಜಿ ಹಾಕಿದ್ದಾರೆಂದು ನಾವು ತಿಳಿದುಕೊಂಡಿದ್ದೆವು.

Building Grant for the Board High School at Sullia in South Kanara District.

Q.—193. **Sri K. VENKATARAMANA GOWDA** (Puttur).—

Will the Government be pleased to state :—

(*a*) whether they have received an application by the President, South Kanara District Board, to provide building grant for the Board High School at Sullia ;

(*b*) if so, whether and when the grant will be sanctioned?

A.—**Sri V. VENKATAPPA** (Minister for Education).—

(*a*) Yes.

(*b*) Will be considered on merits.

Sri K. VENKATARAMANA GOWDA.—May I know how long it will take for consideration?

Smt. GRACE TUCKER.—It is being considered. I cannot tell the Hon'ble Member how long it will take.